**ದಿನಾಂಕಃ 08-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಸ್.ಎನ್.ಎಂ. ವಕೀಲರಿಂದ**

ನಾನು ಮತ್ತು ನಮ್ಮ ಮಾವ ರಾಜೀ ಮಾಡಿಕೊಂಡು ಚೆನ್ನಾಗಿ ಇರುತ್ತೇವೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನೂರುಲ್ಲಾ ಭಾಷಾ ರವರು ಕ್ಯಾತಗಾನಹಳ್ಳಿಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲ. ನನಗೆ ಕನ್ನಡದ ಯಾವುದೇ ಅಕ್ಷರಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ನಿಪಿ. 1 ಮತ್ತು 2 ರಲ್ಲಿ ಯಾರು ಯಾರ ಹೆಸರು ನಮೂದಾಗಿದೆ ಎಂದು ಓದಲು ಬರುವುದಿಲ್ಲ ಎಂದರೆ ಸರಿ. ನಿಪಿ. 3 ರಲ್ಲಿ ಏನು ಬರೆದಿದೆ ಎಂದು ನನಗೆ ಓದಲು ಬರುವುದಿಲ್ಲ ಎಂದರೆ ಸರಿ. ನನ್ನ ಮಾವ ತೆಲುಗು ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ನನ್ನ ಮಾವನ ಪೂರ್ಣ ಹೆಸರು ಅಬ್ದುಲ್ ಜಲೀಲ್ ಸಾಬ್ ಆಗಿರುತ್ತದೆ. ನಿಪಿ. 3(ಸಿ) ಅನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ನನಗೆ ಸದರಿ ಪದ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ. 3 ಅನ್ನು ಅಬ್ದುಲ್ ಜಲೀಲ್ ಸಾಬ್ ರವರು ಅಬ್ದುಲ್ ಖಾದರ್ ರವರಿಗೆ ತಾಲ್ಲೂಕು ಕಛೇರಿಯ ಬಳಿ ಇರುವ ದೇವಸ್ಥಾನದ ಹತ್ತಿರ ಬರೆದುಕೊಟ್ಟಿರುತ್ತಾರೆ.

ಸದರಿ ದೇವಸ್ಥಾನ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ. 3 ಅನ್ನು ಪಾವಗಡದ ರಾಮಾಂಜಿನಪ್ಪ ರವರು ಬರೆದಿರುತ್ತಾರೆ. ಸದರಿ ರಾಮಾಂಜಿನಪ್ಪ ರವರು ಕಳೆದ 15 ದಿನದ ಹಿಂದೆ ತೀರಿಕೊಂಡಿರುತ್ತಾರೆ. ನಿಪಿ. 3 ಅನ್ನು ಸದರಿ ರಾಮಾಂಜಿನಪ್ಪ ರವರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ. 3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. 100 ರೂ. ಮುಖಬೆಲೆಯ 20 ಬಂಡಲ್ ನಂತೆ 2 ಹಣವನ್ನು ನೀಡಿ ಸ್ವಾಧೀನ ಬಿಟ್ಟುಕೊಟ್ಟ ಬಗ್ಗೆ ನಿಪಿ. 3 ರಲ್ಲಿ ನಮೂದಾಗಿರುತ್ತದೆ. ನಮ್ಮ ಮಾವ ನನ್ನ ಅಣ್ಣನಿಗೆ ಸ್ವಾಧೀನವನ್ನು ಬಿಟ್ಟುಕೊಟ್ಟ ನಂತರ ನನ್ನ ಅಣ್ಣ ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದರು. ನನ್ನ ಅಣ್ಣ ಸದರಿ ಜಮೀನಿನ ಕಂದಾಯ ಪಾವತಿಸಿರುತ್ತಾರೆ. ನಾನು ನನ್ನ ಅಣ್ಣ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನನಗೂ ಹಾಗೂ ನನ್ನ ಅಣ್ಣನ ನಡುವೆ ವಿಶ್ವಾಸ ಹಾಗೂ ಮಾತುಕತೆ ಇರುತ್ತದೆ. ನನ್ನ ಅಣ್ಣ ಪಹಣಿ ಪತ್ರಿಕೆಯ ಅನುಭೋಗದ ಕಾಲಂ ನಲ್ಲಿ ತನ್ನ ಹೆಸರನ್ನು ಅರ್ಜಿ ನೀಡಿ ನಮೂದು ಮಾಡಿಸಿಕೊಂಡಿರುತ್ತಾರೋ ಇಲ್ಲವೋ ಎಂಬುದು ನನಗೆ ಗೊತ್ತಿರುವುದಿಲ್ಲ. ರಿಯಾಜ್ ನನ್ನ ಅಕ್ಕನ ಮಗ. ನನಗೂ ಹಾಗೂ ನನ್ನ ಮಾವನಿಗೂ ಕಳೆದ 35 ವರ್ಷಗಳಿಂದ ಮನಸ್ತಾಪ ಇರುವ ಕಾರಣ ನಮ್ಮ ಮಾವನ ಆಸ್ತಿಯನ್ನು ನಾವು ಪಡೆಯುವ ಉದ್ದೇಶದಿಂದ ನಿಪಿ. 3 ಅನ್ನು ನಾನೇ ನನ್ನ ಅಣ್ಣನ ಜೊತೆ ಸೇರಿಕೊಂಡು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 3 ಕ್ಕೆ ನನ್ನ ಮಾವ ಸಹಿ

ಮಾಡಿರುವುದಿಲ್ಲ ನಾವೇ ಅದನ್ನು ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಾವ ನಿಪಿ. 3 ರಂತೆ ಯಾವುದೇ ದಾಖಲಾತಿಯನ್ನು ಮಾಡಿಕೊಟ್ಟಿರುವುದಿಲ್ಲ ನಾವೇ ಅದನ್ನು ಸೃಷ್ಠಿಸಿಕೊಂಡಿರುವುದರಿಂದ ನಿಪಿ. 3 ಕ್ಕೆ ನಮ್ಮ ಕುಟುಂಬಸ್ಥರೇ ಸಾಕ್ಷಿದಾರರೆಂದು ಸೃಷ್ಠಿಸಿ ಅವರ ಸಹಿಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 10.01.1992 ರಂದು ನನ್ನ ಮಾವ ನಿಪಿ. 3 ಅನ್ನು ಬರೆದುಕೊಟ್ಟಿರುತ್ತಾರೆ. ದಿನಾಂಕಃ 10.01.1992 ಯಾವ ವಾರ ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಿನದಂದು ಬೆಳಿಗ್ಗೆ 10.00 ಗಂಟೆ ನಾನು ಪಾವಗಡಕ್ಕೆ ಬಂದಿದ್ದೆ. ಸದರಿ ದಿನದಂದು ನಾನು, ನನ್ನ ಮಾವ, ನನ್ನ ಅಣ್ಣ, ರಾಮಾಂಜಿನಪ್ಪ ಹಾಗೂ ರಿಯಾಜ್ ರವರು ಕ್ಯಾತಗಾನಹಳ್ಳಿಯಿಂದ ಪಾವಗಡಕ್ಕೆ ಬಂದಿರುತ್ತೇವೆ. ನಾವು ಪಾವಗಡಕ್ಕೆ ಬಂದ ನಂತರ ತಾಲ್ಲೂಕು ಕಛೇರಿ ಬಳಿ ಇರುವ ದೇವಸ್ಥಾನದ ಸಮೀಪ ಹೋಗಿರುತ್ತೇವೆ. ಪಾವಗಡದಲ್ಲಿ ಚಾಪಾ ಕಾಗದ ಸಿಗುತ್ತದೆ ಎಂದರೆ ಸಾಕ್ಷಿ ನನ್ನ ಮಾವನಿಗೆ ಕಾನೂನು ತಿಳಿದಿದ್ದ ಕಾರಣ ಒಂದು ಹಾಳೆಯ ಮೇಲೆ ಕರಾರನ್ನು ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ಕ್ಯಾತಗಾನಹಳ್ಳಿಯಲ್ಲಿ ಒಂದು ದಿನ ಕರಾರಿನ ಬಗ್ಗೆ ಮಾತನಾಡಿದ್ದು ನಂತರ ಪಾವಗಡದಲ್ಲಿ ಸದರಿ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಿಪಿ. 3 ರಲ್ಲಿ ನಮೂದಾಗಿರುವ ಅಂಶಗಳನ್ನು ನನ್ನ ಮಾವ ಹೇಳಿ ಬರೆಸಿರುತ್ತಾರೆ. ನಿಪಿ. 3 ಅನ್ನು ತೆಲುಗು ಭಾಷೆಯಲ್ಲಿ ಬರೆದಿರಬಹುದು. ನಿಪಿ.

3 ಕ್ಕೆ ಮೊದಲು ನನ್ನ ಮಾವ ತೆಲುಗು ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ನಂತರ ನಾನು ನನ್ನ ಹೆಬ್ಬೆರಳಿನ ಗುರುತನ್ನು ಹಾಕಿರುತ್ತೇನೆ ತದನಂತರ ರಿಯಾಜ್ ಕನ್ನಡ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಆನಂತರ ರಾಮಾಂಜಿನಪ್ಪ ರವರು ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ನನ್ನ ಮಾವನ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ನಾನು ನನ್ನ ಅಣ್ಣನೊಂದಿಗೆ ಸೇರಿ ನಿಪಿ. 3 ರ ದಾಖಲಾತಿಯನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**